

‘ಮಯೂರ’ದ ಅರ್ಧ ಶತಮಾನದ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ ‘ನವಿಲುಗರಿ’ಗಳನ್ನು ಒಂದೊಂದಾಗಿ ಹೆಕ್ಕಿ ಈ ಅಂಕಣ ಓದುಗರ ಮುಂದಿಡುತ್ತದೆ. 1986ರ ಫೆಬ್ರುವರಿ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಕತೆ ಇಲ್ಲಿದೆ.

ಊರು ತಲುಪಿದ ಸಂಭ್ರಮದಲ್ಲಿ ಬಸ್ಸಿಳಿದ ರಾಜಣ್ಣನಿಗೆ ಬೀಳೊಡೆದ ಗದ್ದೆ ಕಂಡು ಕರುಳುಗೂಡಿಗೆ ಕೊಳ್ಳಿಯಿಕ್ಕಿದಂತಾಗಿತ್ತು. ಒಂದೂವರೆ ಫರ್ಲಾಂಗು ಕಾಲೆಳೆದು ಊರಮುಂದಲ ಸ್ಕೂಲಿನೆದುರು ಹರಡಿಕೊಂಡ ದಿಣ್ಣೆ ಹೊಲವನ್ನು ತಬ್ಬಲಿ ಕಂದನಂತೆ ನಿಂತು ನೋಡಿದ. ರಾಗಿ ಪಯಿರೆಲ್ಲ ಸೀದು ನೆಲಕ್ಕೊರಗಿತ್ತು. ಇಳಿಹೊತ್ತಿನ ಬಿಸಿಲು ನೆತ್ತಿ ಬಾರಿಸತೊಡಗಿ ಹೆಜ್ಜೆ ಕಿತ್ತಿಕ್ಕತೊಡಗಿದವನಿಗೆ ಮಂಕರಿ ಹೊತ್ತುಕೊಂಡು ಬಂದವಳು ದೊಡ್ಡವ್ವನೇ ಇರಬೇಕು ಅನಿಸಿ ಹಲ್ಲುಬಿಟ್ಟ. ದೊಡ್ಡವ್ವ ಇವನ ಗುರುತೇ ಹತ್ತದೆ ಕಣ್ಣು ಕಿರಿದು ಮಾಡಿಕೊಂಡು ಮುಂದಕ್ಕೆ ಸಾಗಿದ್ದು ಕಂಡು ರಾಜಣ್ಣನಿಗೆ ದಿಗ್ಭ್ರಮೆಯಾಗಿ ಹೋಯಿತು. ನಲವತ್ತು